International Journal of Kannada Research 2024; 10(2): 36-39




International Journal of Kannada Research
www.kannadajournal.com

**ISSN: 2454–5813**
IJKR 2024; 10(2): 36-39
© 2024 IJKR
www.kannadajournal.com
Received: 15-02-2024
Accepted: 19-03-2024

**ಡಾ. ಲಾವಣ್ಯ ಸಿ.ಪಿ.**
ಸಹಾಯಕ ಪ್ರಾಧ್ಯಾಪಕರು,
ಶೇಷಾದ್ರಿಪುರಂ ಪದವಿ ಕಾಲೇಜು,
ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ಲಾವಣ್ಯ ಸಿ.ಪಿ.**
ಸಹಾಯಕ ಪ್ರಾಧ್ಯಾಪಕರು,
ಶೇಷಾದ್ರಿಪುರಂ ಪದವಿ ಕಾಲೇಜು,
ಮೈಸೂರು, ಕರ್ನಾಟಕ, ಭಾರತ

# ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಶೋಭೆಗೊಂಡ ಮೂಲದ ಸ್ತ್ರೀ ಪಾತ್ರಗಳು

**ಡಾ. ಲಾವಣ್ಯ ಸಿ.ಪಿ.**

**ಪೀಠಿಕೆ**
ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವು ೧೯೬೭ ರಲ್ಲಿ ಜ್ಞಾನಪೀಠ ಪ್ರಶಸ್ತಿಗೆ ಪಾತ್ರವಾಗಿ ಕನ್ನಡ ಸಾಹಿತ್ಯದ ಕಿರೀಟಕ್ಕೆ ಮೊದಲ ಜ್ಞಾನಪೀಠ ಪುರಸ್ಕಾರದ ಗರಿಯನ್ನು ತೊಡಿಸಿತು. ಶ್ರೀ ರಾಮಾಯಣ ದರ್ಶನಂ ಕಾವ್ಯಕ್ಕೆ ವಾಲ್ಮೀಕಿ ಮಹರ್ಷಿ ಬರೆದಿರುವ ಸಂಸ್ಕೃತ ಭಾಷೆಯಲ್ಲಿರುವ ಶ್ರೀ ಮದ್ರಾಮಾಯಣವೇ ಮೂಲ. ಆದರೆ ಶ್ರೀ ರಾಮಾಯಣ ದರ್ಶನಂ ಕಾವ್ಯವು ಶ್ರೀ ಮದ್ರಾಮಾಯಣ ಕಾವ್ಯದ ಕನ್ನಡಾನುವಾದವಲ್ಲ, ಬದಲಿಗೆ ಕಾವ್ಯದ ಪುನ:ಸೃಷ್ಟಿಯಾಗಿದೆ. ವಾಲ್ಮೀಕಿ ರಾಮಾಯಣದ ಕಥೆಯನ್ನು ಆಧರಿಸಿ ಕುವೆಂಪು ಅವರು ಕಾವ್ಯವನ್ನು ಬರೆದಿದ್ದಾರೆಯೇ ಹೊರತು, ಒಳಗಿನ ಚೈತನ್ಯ ವಾಲ್ಮೀಕಿಯದಲ್ಲ. ಇದನ್ನು ಕುವೆಂಪು ಅವರು "ತನು ನಿನ್ನದಾದೊಡಂ ಚೈತನ್ಯಮೆನ್ನದೆನೆ" ಎಂದಿದ್ದಾರೆ. ಅಂತೆಯೇ ವಾಲ್ಮೀಕಿ ಹೇಳಿದ ಕಥೆಯಾದರೂ "ಕನ್ನಡದಿ ಬೇರೆ ಕಥೆಯೆಂಬಂತೆ, ಬೇರೆ ಮೈಯಾಂತಂತೆ, ಮರುವುಟ್ಟು ಪಡೆದಂತೆ" ಎಂದಿದ್ದಾರೆ. ಸಾಮಾನ್ಯವಾಗಿ ಮೂಲದ ಕಾವ್ಯವನ್ನಿಟ್ಟುಕೊಂಡು ಕಾವ್ಯದ ಪುನ:ಸೃಷ್ಟಿಯಾದಾಗ ಅಲ್ಲಲ್ಲಿ ಹಲವು ಭಾಗಗಳಲ್ಲಿ ಕವಿ ತನ್ನ ಸ್ವಂತಿಕೆಯನ್ನು ಮೆರೆಯುವುದು ಸಾಮಾನ್ಯ. ವಾಲ್ಮೀಕಿ ಆರು ಕಾಂಡಗಳಲ್ಲಿ ರಚಿಸಿದ ಶ್ರೀಮದ್ರಾಮಾಯಣವನ್ನು ಕುವೆಂಪು ಅವರು ನಾಲ್ಕು ಸಂಪುಟಗಳಲ್ಲಿ ಶ್ರೀ ರಾಮಾಯಣ ದರ್ಶನಂ ಎಂಬ ಹೆಸರಿನಲ್ಲಿ ರಚಿಸಿದ್ದಾರೆ. ಅಯೋಧ್ಯಾ ಸಂಪುಟಂ, ಕಿಷ್ಕಿಂದಾ ಸಂಪುಟಂ, ಲಂಕಾ ಸಂಪುಟಂ ಮತ್ತು ಶ್ರೀ ಸಂಪುಟಂ ಎಂಬುದಾಗಿ ನಾಲ್ಕು ಸಂಪುಟಗಳಲ್ಲಿ ರಚಿಸಲಾಗಿದೆ. ಅದರ ಒಳಗೆ ಸಂಚಿಕೆಗಳೆಂದು ಸುಮಾರು ೫೦ ವಿಭಾಗಗಳಾಗಿ ವಿಂಗಡಿಸಿಕೊಂಡು ಮುನ್ನೂರ ಮೂವತ್ತಾರು ಪಂಕ್ತಿಗಳಲ್ಲಿ ಕಾವ್ಯ ರಚನೆಗೊಂಡಿದೆ. ಇವೇ ಅಲ್ಲದೆ ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಸನ್ನಿವೇಶ, ಕತೆ, ವೈಚಾರಿಕತೆ, ವಸ್ತು ಸಂವಿಧಾನದಂತೆ ಪಾತ್ರ ಚಿತ್ರಣದಲ್ಲಿಯೂ ಭಿನ್ನವಾದ ನಿರ್ವಹಣೆಯನ್ನು ಕಾಣಬಹುದು. ಮೂಲದ ಕೃತಿಯಲ್ಲಿ ಸ್ವಾರ್ಥಿಯಾಗಿ ಗುರುತಿಸಿಕೊಂಡ ಕೈಕೆ, ಮಂಥರೆ ಹಾಗೂ ಒಂದೆರಡು ಬಾರಿ ಮಾತ್ರ ಪ್ರಸ್ತಾಪಗೊಳ್ಳುವ ಊರ್ಮಿಳೆಯ ಪಾತ್ರಗಳು ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಔನ್ನತ್ಯಗೊಂಡ ಸ್ತ್ರೀ ಪಾತ್ರಗಳಾಗಿವೆ. ಕುವೆಂಪು ಅವರು ಈ ಮೂರು ಸ್ತ್ರೀ ಪಾತ್ರಗಳನ್ನು ಬೆಳವಣಿಗೆ ಹೊಂದಿದ ಪಾತ್ರಗಳಾಗಿ ಚಿತ್ರಿಸಿರುವುದನ್ನು ಇಲ್ಲಿ ಅನುಲಕ್ಷಿಸಲಾಗಿದೆ.

**ಪೀಠಿಕೆ:**
ರಾಮಾಯಣ ಮಹಾಭಾರತ ಗ್ರಂಥಗಳು ಭಾರತೀಯರಿಗೆ ಪೂಜನೀಯ ಗ್ರಂಥಗಳು. ಪುರಾಣಗಳು, ರಾಮಾಯಣ, ಮಹಾಭಾರತಗಳು ಕನ್ನಡದಲ್ಲಿ ರಚನೆಯಾಗುವುದಕ್ಕೆ ಮೊದಲು ಸಂಸ್ಕೃತ ಸಾಹಿತ್ಯ ಶ್ರೀಮಂತವಾಗಿತ್ತು. ವಾಲ್ಮೀಕಿ ಸಂಸ್ಕೃತದಲ್ಲಿ ರಾಮಾಯಣ ಕಾವ್ಯವನ್ನು ರಚಿಸಿದ್ದರು. ಈ ಕೃತಿಯನ್ನು ಆಧಾರವಾಗಿಟ್ಟುಕೊಂಡು ಕವಿ ಕುವೆಂಪು ಶ್ರೀ ರಾಮಾಯಣದರ್ಶನಂ ಮಹಾಕಾವ್ಯವನ್ನು ರಚಿಸಿದರು. ಇದು ಶ್ರೀಮದ್ರಾಮಾಯಣದ ಪುನ:ಸೃಷ್ಟಿಯಾಗಿದೆ. ವಾಲ್ಮೀಕಿ ರಾಮಾಯಣದ ಕಥೆಯನ್ನು ಕುವೆಂಪು ತೆಗೆದುಕೊಂಡಿದ್ದರೂ ಅದನ್ನು ಯುಗಧರ್ಮಕ್ಕೆ ಕಾಲಧರ್ಮಕ್ಕೆ ತಕ್ಕಂತೆ ಮಾರ್ಪಡಿಸಿದ್ದಾರೆ. ಇಲ್ಲಿರುವ ಪಾತ್ರಗಳು ಮೂಲದ್ದೇ ಆದರೂ ಅವುಗಳ ಗುಣಸ್ವಭಾವದಲ್ಲಿ ಬದಲಾವಣೆಯನ್ನು ವಿಕಾಸವನ್ನು ಕಾಣುತ್ತೇವೆ. ಇವುಗಳಲ್ಲಿ ವಾಲ್ಮೀಕಿಯ ಶ್ರೀಮದ್ರಾಮಾಯಣದಲ್ಲಿನ ಸ್ತ್ರೀ ಪಾತ್ರಗಳು ವಿಶೇಷವಾಗಿ ಹೊಳಪು ಪಡೆದಿರುವುದನ್ನು ಕಾಣಬಹುದು. ಮೂಲದಲ್ಲಿ ಬರುವ ಪಾತ್ರಗಳೇ. ಅದೇ ಕೈಕೆ, ಅದೇ ಮಂಥರೆ, ಅದೇ ಊರ್ಮಿಳೆ. ಆದರೆ ಅಲ್ಲಿರುವಂಥ ಕೈಕೆಯಲ್ಲ, ಅಲ್ಲಿರುವಂಥ ಮಥರೆಯಲ್ಲ,

ಅಲ್ಲಿರುವಂಥ ಊರ್ಮಿಳೆಯಲ್ಲ. ಈ ಪಾತ್ರಗಳ ಚಿತ್ರಣದಲ್ಲಿ ಕುವೆಂಪು ಅವರು ಈ ಯುಗದ ಮನೋಧರ್ಮಕ್ಕೆ ಅನುಗುಣವಾಗಿ ಚಿಂತಿಸಿದ್ದಾರೆ, ಇದು ವಿಶೇಷವಾಗಿದೆ. ಮೂಲದ ಪಾತ್ರಗಳು ಹಳೆಯದೇ ಆದರೂ ಆ ಪಾತ್ರಗಳು ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಯಾವ ರೀತಿ ಹೊಸ ಬಾಳನ್ನು ಬಾಳುತ್ತವೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

**ಅಧ್ಯಯನದ ವಿಧಾನ**

ಕನ್ನಡದ ಮೊದಲ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೃತಿ ಶ್ರೀ ರಾಮಾಯಣ ದರ್ಶನಂ ಕೃತಿಯಲ್ಲಿರುವ ಔನ್ನತ್ಯಕ್ಕೇರಿದ ಸ್ತ್ರೀ ಪಾತ್ರಗಳಾದ ಕೈಕೆ, ಮಂಥರೆ, ಊರ್ಮಿಳೆಯ ಪಾತ್ರಗಳನ್ನು ಮೂಲದ ಕೃತಿ ವಾಲ್ಮೀಕಿಯ ಶ್ರೀಮದ್ರಾಮಾಯಣ ಕೃತಿಗೆ ಹೋಲಿಸಿ ತೌಲನಿಕ ಅಧ್ಯಯನ ವಿಧಾನದ ಮೂಲಕ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

**ವ್ಯಾಪ್ತಿ**

ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮತ್ತು ವಾಲ್ಮೀಕಿಯ ಶ್ರೀಮದ್ರಾಮಾಯಣದಲ್ಲಿರುವ ಸ್ತ್ರೀ ಪಾತ್ರಗಳಾದ ಕೈಕೆ, ಮಂಥರೆ ಮತ್ತು ಊರ್ಮಿಳೆಯ ಪಾತ್ರ ಚಿತ್ರಣವನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

**ಉದ್ದೇಶ**

ಕುವೆಂಪು ಅವರು ವಾಲ್ಮೀಕಿಯ ಕಾವ್ಯವನ್ನು ಆಕರವನ್ನಾಗಿ ಸ್ವೀಕರಿಸಿ, ತನಗಿಷ್ಟ ಬಂದಂತೆ ಸನಿವೇಶ ಹಾಗೂ ಪಾತ್ರಗಳನ್ನು ಬದಲಾಯಿಸಿ ಬರೆದರೂ ಜನರು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಸ್ವೀಕರಿಸಿದ್ದಾರೆ. ಕೃತಿಯಲ್ಲಿ ಆರಂಭದಿಂದ ಅಂತ್ಯದವರೆಗೆ ಹಲವಾರು ಪಾತ್ರಗಳು ಬರುತ್ತವೆ. ಅವುಗಳಲ್ಲಿ ಕೈಕೆ, ಮಂಥರೆ ಮತ್ತು ಊರ್ಮಿಳೆ ಈ ಮೂರು ಪಾತ್ರಗಳು ಇನ್ನುಳಿದ ಮುಖ್ಯ ಪಾತ್ರಗಳಿಗಿಂತಲೂ ಕುವೆಂಪು ಕಾವ್ಯದಲ್ಲಿ ಹೇಗೆ ವಿಶೇಷತೆಯನ್ನು ಪಡೆದುಕೊಂಡಿವೆ ಎಂಬುದನ್ನು ಮತ್ತು ಮೂಲದಲ್ಲಿನ ಕೈಕೆ, ಮಂಥರೆ ಜನಮನದಲ್ಲಿ ಪಾಪಿಗಳಾಗಿ ಉಳಿದ ಪಾತ್ರಗಳು ಹೇಗೆ ವಿಶೇಷ ಗೌರವಕ್ಕೆ ಪಾತ್ರವಾಗುತ್ತವೆ ಎಂಬುದನ್ನೂ ಹಾಗೂ ಕುವೆಂಪು ಮೂಲದ ಪಾತ್ರಗಳನ್ನು ಎಲ್ಲರ ಮನಸ್ಸಿನಲ್ಲಿ ಉಳಿಯುವಂತೆ ತಮ್ಮ ಪ್ರತಿಭೆಯ ಮೂಲಕ ಹೇಗೆ ಮರುಸೃಷ್ಟಿಸಿದ್ದಾರೆ ಎಂಬುದನ್ನು ಕಂಡುಕೊಳ್ಳುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

**ಫಲಿತಗಳು**

- ಮೂಲ ಕೃತಿಗಿಂತಲೂ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಕೈಕೆ, ಮಂಥರೆ ಮತ್ತು ಊರ್ಮಿಳೆಯ ಪಾತ್ರಗಳು ಗುಣ ವಿಶೇಷಗಳಿಂದ ಕೂಡಿವೆ.
- ಕುವೆಂಪು ಅವರು ಮೂಲ ಕೃತಿ ವಾಲ್ಮೀಕಿಯ ಪಾತ್ರಗಳ ಮೂಲ ಸ್ವರೂಪಕ್ಕೆ ಭಂಗ ಬರದಂತೆ ವಿಭಿನ್ನವಾಗಿ ಪಾತ್ರಗಳನ್ನು ಚಿತ್ರಿಸಿ ಯಶಸ್ವಿಯಾಗಿದ್ದಾರೆ.
- ಒಂದು ಸಿದ್ಧ ಕೃತಿಯ ಸಿದ್ಧ ಪಾತ್ರಗಳನ್ನು ಕುವೆಂಪು ಅವರು ಇಲ್ಲಿ ಮರು ಸೃಷ್ಟಿಸಿದ್ದಾರೆ.
- ಕುವೆಂಪು ಈ ಮೂರೂ ಸ್ತ್ರೀ ಪಾತ್ರಗಳನ್ನು ಈ ಯುಗದ ಮನೋಧರ್ಮಕ್ಕೆ ಅನುಗುಣವಾಗಿ ಚಿತ್ರಿಸಿದ್ದಾರೆ.
- ಮೂಲದ ಕೈಕೆ ಮತ್ತು ಮಂಥರೆಯ ಪಾತ್ರಗಳಿಗೆ ಮೆತ್ತಿದ ಕಳಂಕದಿಂದ ಅವರನ್ನು ಮುಕ್ತಿಗೊಳಿಸಿದ್ದಾರೆ.

**ಕೈಕೆ ಪಾತ್ರ**

ದಶರಥ ಮಹಾರಾಜನ ಪತ್ನಿಯಾದ ಕೈಕೆಯನ್ನು ವಾಲ್ಮೀಕಿ ರಾಮಾಯಣದಲ್ಲಿ ತನ್ನ ಹಟದಿಂದ, ಸವತಿ ಮಾತ್ಸರ್ಯ ಗುಣದಿಂದ, ಸ್ವಾರ್ಥದಿಂದ ರಾಮನ ವನವಾಸಕ್ಕೆ ಕಾರಣಳಾಗಿ ಕಳಂಕಿತ ಪಾತ್ರವಾಗಿ ಚಿತ್ರಿಸಲಾಗಿದೆ. ರಾಮ ಸೀತೆ ಲಕ್ಷ್ಮಣರು ವನವಾಸಕ್ಕೆ ಹೊರಟಾಗ ಇಡೀ ಅಯೋಧ್ಯೆಯ ಜನರು ಕೈಕೆಯನ್ನು ನಿಂದಿಸುತ್ತಾರೆ. ದಶರಥ, ಲಕ್ಷ್ಮಣ, ಭರತರು ಪಾಪಿ, ಕುಲನಾಶಿನಿ, ವಿಷಸರ್ಪಿಣಿ ಎಂದೆಲ್ಲಾ ಆಕೆಯನ್ನು ನಿಂದಿಸುತ್ತಾರೆ. ತಾಯಿಯ ಕೆಟ್ಟನಡೆಗೆ ಭರತ ಕೈಕೆಯನ್ನು ತಿರಸ್ಕರಿಸುತ್ತಾನೆ. ಅನಂತರ ಕೈಕೆ ಮೌನವಾಗುತ್ತಾಳೆ. ರಾಮನು ವನವಾಸ ಮುಗಿಸಿ ಬಂದಾಗ ರಾಮನನ್ನು ಭೇಟಿಯಾಗಲು ಹೋದ ಇತರ ರಾಣಿಯರೊಂದಿಗೆ ಕೈಕೆ ರಾಮಾದಿಗಳ ಭೇಟಿಯಾಗಲು ತಾನೂ ಹೋಗುತ್ತಾಳೆ. ಆದರೆ ಅಲ್ಲಿ ಆಕೆ ಏನನ್ನೂ ಮಾತನಾಡದೆ ಮೌನವಾಗಿರುತ್ತಾಳೆ. ವಾಲ್ಮೀಕಿ ರಾಮಾಯಣದ ನಂತರ ಹಲವರು ರಾಮಾಯಣ ಬರೆದರೂ ಯಾವ ಕವಿಯೂ ಕೈಕೆಗೆ ಅಂಟಿದ ಕಳಂಕವನ್ನು ಕಳೆಯದೇ ಹೋದರು. ಶತಶತಮಾನಗಳಿಂದ ಇವರು ಪಾಪಿಯಾಗಿಯೇ ಉಳಿಯುತ್ತಾಳೆ.

ಕಾವ್ಯ ಇತಿಹಾಸದಲ್ಲಿ ಕೆಲವು ಪಾತ್ರಗಳಿಗೆ ಅಂಟಿದ ಕಳಂಕವನ್ನು ತೆಗೆಯುವುದು ಅಷ್ಟು ಸುಲಭದ ಸಂಗತಿಯಲ್ಲ. ಆದರೆ, ಕುವೆಂಪು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಕೈಕೆಯ ಕಳಂಕವನ್ನು ತೊಡೆದು ಆಕೆಯ ಪಾತ್ರಕ್ಕೆ ಮೆರುಗು ತಂದಿದ್ದಾರೆ. ವಾಲ್ಮೀಕಿಯ ಶ್ರೀಮದ್ರಾಮಾಯಣದಲ್ಲಿ ಪಾಪಿಯಾದ ಕೈಕೆ ಮತ್ತು ಮಂಥರೆಯರು ತಮ್ಮ ಕಳಂಕ ತೊಡೆದುಕೊಳ್ಳಲು ಇಪ್ಪತ್ತನೆಯ ಶತಮಾನದವರೆಗೂ, ಕವಿ ಕುವೆಂಪು ಶ್ರೀ ರಾಮಾಯಣ ದರ್ಶನಂ ಕಾವ್ಯ ಬರೆಯುವವರೆಗೂ ಕಾಯಬೇಕಾಯಿತು.

ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ರಾಮ ವನವಾಸಕ್ಕೆ ತೆರಳಿದುದು ದಶರಥ ಮಹಾರಾಜನ ಸಾವು, ಇದಕ್ಕೆಲ್ಲ ಕೈಕೆಯೇ ಕಾರಣಳಾಗುತ್ತಾಳೆ. ಲೋಕದ ಕಣ್ಣಿಗೂ, ಮಗ ಭರತನ ಕಣ್ಣಿಗೂ ದೋಷಿಯಾಗಿ ಕಾಣುತ್ತಾಳೆ. ಅವಳಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಪಶ್ಚಾತ್ತಾಪ ಭಾವ ಕಾಡುತ್ತದೆ. ನೊಂದಿದ್ದಾಳೆ, ಬೆಂದಿದ್ದಾಳೆ. ಆದ್ದರಿಂದ ಮಗನನ್ನು ಕಂಡೊಡನೆ "ಮನ್ನಿಸೆನ್ನನು ಮಗನೆ; ಪಾಪಿಯನ್!" ಎಂದು ನೊಂದು ನುಡಿಯುತ್ತಾಳೆ. "ಕೈಬಿಡದಿರೆನ್ನಂ ಮಗನೆ, ಕೆಟ್ಟಳೆನ್! ಜಗವೆ ಕೈಬಿಟ್ಟಳೆನ್! ನೂಂಕು ನರಕಕೆ; ಸಹಿಸಿ ಬಹೆನೊ ಕೇಡಂ ತವಿಸಿ; ನೋಂಕದಿರೊ ಶೂನ್ಯತೆಗೆ!" ಎಂದು ಮಗನಲ್ಲಿ ಬೇಡಿಕೊಳ್ಳುತ್ತಾಳೆ. ರಾಮನನ್ನು ಕರೆತರಲು ಹೊರಟ ಭರತನಿಗೆ ತನ್ನನ್ನೂ ಜೊತೆಯಲ್ಲಿ ಕರೆದೊಯ್ಯುವಂತೆ ವಿನಂತಿಸುತ್ತಾಳೆ. ಭರತನು ತನ್ನ ತಾಯಿಯನ್ನು ಕುರಿತು ಅಣ್ಣ ರಾಮನನ್ನು ಕರೆತಂದು ಆತನಿಗೆ ಮತ್ತೆ ರಾಜ್ಯವನ್ನು ಒಪ್ಪಿಸುತ್ತೇನೆ, ಒಂದು ವೇಳೆ ಆತ ಒಪ್ಪದಿದ್ದರೆ, ನೀನು ಮಾಡಿರುವ ಕೆಟ್ಟ ಕಾರ್ಯವನ್ನು ರಾಮಸೇವೆಯಲ್ಲಿ ತೊಡಗಿ ತೊಳೆಯುತ್ತೇನೆ ಎಂದು ಹೊರಟಾಗ, "ಮಂಗಳದ ಮನೆಗೆ ನಡೆದಪೆನೊ ನೀನೆಂದಂತೆವೊಲ್ ನಳಲಂತೆ, ಕೈಕೆಗಿನ್ನು ಬಾಯಿಲ್ಲೊ" ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಈ ಮಾತಿನಲ್ಲಿ ಕೈಕೆಗೆ ಪಶ್ಚಾತ್ತಾಪವಾಗಿರುವುದನ್ನು ಕುವೆಂಪು ತಿಳಿಸಿದ್ದಾರೆ. ರಾಮನಿಲ್ಲದ ಅರಮನೆ ಅಮಂಗಳದ ನೆಲೆಯಾಗಿ, ರಾಮನಿರುವ ಅರಣ್ಯ ಅವಳಿಗೆ ಮಂಗಳದ ಮನೆಯಾಗಿ ಕಂಡಿದೆ. ಇದು ಕುವೆಂಪು ಅವರ ಕೈಕೆಯ ಹೃದಯಾಂತರಾಳದ ಮಾತುಗಳಾಗಿವೆ. ತಪ್ಪಿನ ಅರಿವಾದಾಗ ಕೈಕೆ ಪಶ್ಚಾತ್ತಾಪದಿಂದ ಬೆಂದು ಪರಿಶುದ್ಧವಾಗಿದ್ದಾಳೆ. ಕುವೆಂಪು ಕೈಕೆ ತನ್ನ ಮನದಲ್ಲಿನ ಮಲಿನವನ್ನೆಲ್ಲ ಕಳೆದುಕೊಂಡು ಪರಿಶುದ್ಧ ಚಿನ್ನವಾಗಿ ಕಾಣಿಸುತ್ತಾಳೆ. ಕುವೆಂಪು ಭರತನು ತಾಯಿಗೆ "ರಾಮನನುಜನ ತಾಯ್ಗೆ ಕೇಡುಂಟೆ? ಪಾಪಿಗುದ್ಧಾರಮಿಹುದಾ ಮಹದ್‌ವ್ಯೂಹ ರಚನೆಯೊಳ್" ಎಂದು ಇದೆಲ್ಲಾ ವಿಧಿ ನಿಯಮವೆಂದು ತಾಯಿಯನ್ನು ಸಮಾಧಾನಿಸುತ್ತಾನೆ. ಸೃಷ್ಟಿಯ ಮಹದ್‌ವ್ಯೂಹ ರಚನೆಯಲ್ಲಿ ಪಾಪಿಗೂ ಉದ್ಧಾರವಿದೆ ಎಂಬ ಮೂಲಕ ಕೈಕೆಗೆ ಮೆತ್ತಿದ ಕಳಂಕದಿಂದ ಆಕೆಯನ್ನು ಮುಕ್ತಿಗೊಳಿಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ.

ಮೂಲದಲ್ಲಿ ಆಕೆ ಪಶ್ಚಾತ್ತಾಪದಿಂದ ನೋಯುವ ಬಗ್ಗೆ ವಿವರಗಳಿಲ್ಲ. ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಕೈಕೆ, ಮಂಥರೆ ಮೊದಲಾದ ಪಾತ್ರಗಳು ವಿಕಾಸದ ಹಾದಿಯಲ್ಲಿ ಸಾಗುತ್ತವೆ. ಕೈಕೆ ರಾಮನನ್ನು ಕಾಡಿಗೆ ಕಳುಹಿಸಲು ಕಾರಣಳಾಗದಿದ್ದಿದ್ದರೆ ರಾಮನ ವ್ಯಕ್ತಿತ್ವ ವಿಕಾಸವಾಗುತ್ತಿರಲಿಲ್ಲ ಎಂದಿರುವ ಕುವೆಂಪು ಕೈಕೆಯ ಪಾತ್ರವನ್ನು ಪರಿವರ್ತನಶೀಲ ಪಾತ್ರವನ್ನಾಗಿಸಿದ್ದಾರೆ.

**ಮಂಥರೆಯ ಪಾತ್ರ**

ವಾಲ್ಮೀಕಿಯ ಶ್ರೀಮದ್ರಾಮಾಯಣದಲ್ಲಿ ಮಂಥರೆಯು ಖಳನಾಯಕಿಯಂತೆ, ಪಾಪಿಯಂತೆ ಚಿತ್ರಣಗೊಂಡಿದ್ದರೆ, ಕುವೆಂಪು ರಾಮಾಯಣದಲ್ಲಿ ಭಿನ್ನವಾಗಿ ಗುರುತಿಸಿಕೊಂಡಿದ್ದಾಳೆ. ವಾಲ್ಮೀಕಿ ರಾಮಾಯಣದಿಂದಾಗಿ ರಾಮನು ವನವಾಸಕ್ಕೆ ಹೋಗಲು, ಸೀತೆಯು ಕಷ್ಟಗಳಿಗೆ ಸಿಲುಕಲು, ಒಟ್ಟಾರೆಯಾಗಿ ರಾಮಾಯಣ ನಡೆಯಲು ಪಾಪಿ ಮಂಥರೆಯೇ ಕಾರಣ ಎಂಬ ವಿಷಯ ಜನಸಾಮಾನ್ಯರಲ್ಲಿ ಆಳವಾಗಿ ಬೇರೂರಿತು. ಅಂದಿನಿಂದ ಎಲ್ಲರ ತಿರಸ್ಕಾರಕ್ಕೆ, ಶಾಪಕ್ಕೆ ಮಂಥರೆ ತುತ್ತಾಗುತ್ತಾ ಬಂದಿದ್ದಾಳೆ. ಅಲ್ಲದೆ, ಮಂಥರೆ ಎಂಬ ಪದವೇ ಬೈಗುಳವಾಗಿ ಬದಲಾಗಿ ತಾಮಸ ಸ್ವಭವಕ್ಕೆ ಈಕೆ ಸಂಕೇತವಾದಳು. ವಾಲ್ಮೀಕಿ ರಾಮಾಯಣದಲ್ಲಿ ಮಂಥರೆಯ ಬಗ್ಗೆ ಹೇಚ್ಚೇನು ಹೇಳಿಲ್ಲ. ಕೈಕೆಯೊಂದಿಗೆ ತವರು ಮನೆಯಿಂದ ಬಂದವಳು, ಎಲ್ಲಿ ಹುಟ್ಟಿದಳೋ, ಯಾರು ತಂದೆ ತಾಯಿಗಳೋ ತಿಳಿಯದು, ಮೊದಲಿನಿಂದಲೂ ಕೈಕೇಯಿಯ ಜೊತೆಯಲ್ಲಿಯೇ ಇರುತ್ತಿದ್ದಳು ಎಂದಿಷ್ಟೇ ವಾಲ್ಮೀಕಿ ಮಂಥರೆಯ ಬಗ್ಗೆ ಹೇಳಿರುವುದು. ರಾಮ ವನವಾಸಕ್ಕೆ ಹೋದ ನಂತರ ಮಂಥರೆಯ ಬದುಕು ಏನಾಯಿತು ಎಂಬ ಬಗ್ಗೆಯೂ ಹೇಳಿಲ್ಲ.

ಕುವೆಂಪು ಅವರು ಮಂಥರೆಯು ಕೈಕೆಯ ತಾತನಿಗೆ ಅರಣ್ಯದಲ್ಲಿ ದೊರೆತಿದ್ದು ಕರುಣೆಯಿಂದ ಅರಮನೆಗೆ ತಂದಾಗ ಎಲ್ಲರೂ "ಚಿ: ಥೂ ಎಂದು ಸಾಯೆಂದು ನಾಯ್ಮರಿಗೂ ಕಡೆಯಾಗಿ" ಕಣುತ್ತಾರೆ. ಇದರಿಂದ ಮಂಥರೆ ಮನುಷ್ಯರ ಪ್ರೀತಿಯ ಗಂಧವಿಲ್ಲದೆ ಬೆಳೆಯುತ್ತಾಳೆ. ಕೈಕೆ ಭರತರೇ ಆಕೆಯ ಬದುಕು. ರಾಮ ಪಟ್ಟಾಭಿಷೇಕಕ್ಕೆ ಸಿದ್ಧತೆಗಳಾಗುತ್ತಿದ್ದ ಹಿಂದಿನ ರಾತ್ರಿ ಮಂಥರೆಗೆ ಕನಸು ಬೀಳುತ್ತದೆ. ಕುವೆಂಪು ಅವರು ಆ ಕನಸು ಬೀಳಲು ರಾವಣನ ವಿಧಿ ಕಾರಣ ಎನ್ನುತ್ತಾರೆ. ರಾವಣನ ವಿಧಿಯೇ ತಂತ್ರಮಾಡಿ ಮಂಥರೆಗೆ ಇಂಥಾ ಕನಸು ಬೀಳುವಂತೆ ಮಾಡಿ ಮುಂದಿನ ರಾಮಾಯಣಕ್ಕೆ ನಾಂದಿ ಹಾಡಿತೆಂದು ಹೇಳಿದ್ದಾರೆ. ಮೂಲದಲ್ಲಿ ಈ ವಿಚಾರಗಳಿಲ್ಲ. ಇದನ್ನು ಕುವೆಂಪು ಹೊಸದಾಗಿ ಸೇರಿಸಿದ್ದಾರೆ. ಒಂದು ಕಾರ್ಯ ಜರುಗಲು ಇನ್ನ್ಯಾರೋ ಕಾರಣರಾಗುವಂತೆ ಇಲ್ಲಿ ಮಂಥರೆ ಕಾರಣಕರ್ತಳಾಗುತ್ತಾಳೆ ಎಂದಿದ್ದಾರೆ.

ಶ್ರೀ ರಾಮಾಯಣ ದರ್ಶನದಲ್ಲಿ ಮಂಥರೆಯ ಪಾತ್ರ ವಿಶೇಷವಾಗಿ ಚಿತ್ರಿಸುವುದರಿಂದಲೇ ಕುವೆಂಪು ಅವರು ಕಾವ್ಯದಲ್ಲಿ ಮಂಥರೆಯ ಪ್ರವೇಶಕ್ಕೆ ಒಂದು ರಸಪೂರ್ಣ ಸನ್ನಿವೇಶವನ್ನು ಸೃಷ್ಟಿಸಿದ್ದಾರೆ. ಬಾಲರಾಮ ಚಂದ್ರನಿಗಾಗಿ ಬಯಸಿ ಅತ್ತು ರಂಪಾಟ ಮಾಡುವ ಸಂದರ್ಭದಲ್ಲಿ ಯಾರಿಂದಲೂ ಮಗುವಿನ ಆಸೆಯನ್ನು ಪೂರೈಸಲು ಆಗದಿದ್ದಾಗ ಮುದುಕಿ ಮಂಥರೆ ಆಗ ಮೊದಲ ಬಾರಿಗೆ ಕಾವ್ಯದಲ್ಲಿ ಕಾಣಿಸುತ್ತಾಳೆ. ಅವಳನ್ನು ಕಂಡು ಎಲ್ಲರೂ ಅಸಹ್ಯಿಸಿಕೊಂಡರೂ ತನ್ನ ಮಡಿಲಿನಲ್ಲಿದ್ದ ಕನ್ನಡಿಯ ಒಳಗಿನ ಚಂದ್ರಬಿಂದ ಕಾಣಿಸಿ ರಾಮನ ಅಳು ನಿಲ್ಲಿಸುತ್ತಾಳೆ. ಮಗುವನ್ನು ಮುದ್ದಿಸಲು ಬಯಸಿದಾಗ ಕೌಸಲ್ಯೆ "ಕಂದಂಗಮಂಗಳಂ ಮುಟ್ಟದಿರ್" ಎಂದು ತಡೆಯುತ್ತಾಳೆ.

ರಾಮ ಪಟ್ಟಾಭಿಷೇಕವಾದರೆ ಕೈಕೆ, ಭರತರಿಗೆ ಅನ್ಯಾಯವಾಗುತ್ತದೆಂದು ಬಗೆದ ಮಂಥರೆಗೆ ಈ ವಿಷಯ ಭಯ, ದು:ಖ ಉದ್ವೇಗವನ್ನುಂಟು ಮಾಡಿ ಅದನ್ನು ನಿಲ್ಲಿಸಲು ಪ್ರಯತ್ನಿಸುತ್ತಾಳೆ. ಪರಿಣಾಮವಾಗಿ ರಾಮ ಸೀತೆ ಲಕ್ಷ್ಮಣರು ವನವಾಸಕ್ಕೆ ಹೋಗಬೇಕಾಗುತ್ತದೆ. ಆದರೆ ಎಲ್ಲರೊಂದಿಗೆ ಭರತನೂ ಆಕೆಯನ್ನು ಪಾಪಿಯೆಂದು "ತೊಲಗಾಚೆ, ಬಿಸುಟೆನಿದೊ ನಿನ್ನನೆಂದಿಂದಿಗೂ" ಎಂದಾಗ ಮಂಥರೆಗೆ ಸಿಡಿಲು ಬಡಿದಂತಾಗುತ್ತದೆ. ಯಾರ ಸಂತೋಷಕ್ಕಾಗಿ ರಾಮನನ್ನು ಕಾಡಿಗೆ ಕಳುಹಿಸಿದಳೋ ಅದೇ ಭರತನಿಗಾಗಿ ಕಾಡಿನಿಂದ ಕರೆತರುವೆನೆಂದು ರಾಮನನ್ನು ಹುಡುಕುತ್ತಾ ಮಂತರೆಯು ಪುಣ್ಯದ ಅನ್ವೇಷಣೆಗೆ ಹೋಗುವ ಪಾಪದಂತೆ ಕಾಡಿಗೆ ಹೋಗುತ್ತಾಳೆ ಎಂದು ಕುವೆಂಪು ಚಿತ್ರಿಸಿದ್ದಾರೆ. ಕಾಡಿನ ಬೆಂಕಿ ಮಂಥರೆಗೆ ಜ್ಯೋತಿಯಾಗಿ ಕಂಡಾಗ ಅದನ್ನು ರಾಮನೆಂದೇ ಬಗೆದು "ಓ ಭರತನಣ್ಣಯ್ಯ, ಓ ನನ್ನ ರಾಮಯ್ಯ, ಬಾರಯ್ಯ, ದಮ್ಮಯ್ಯ" ಎಂದು ಕರೆಯುತ್ತಾ ನುಗ್ಗುತ್ತಾಳೆ, ಸುಟ್ಟು ಕರಕಲಾಗುತ್ತಾಳೆ.

ಕುವೆಂಪು ಇದನ್ನು ಗಂಟು ಗಂಟಾದ ವಿಕಾರವಾದ ಶ್ರೀಗಂಧದ ಕಟ್ಟಿಗೆ ಅಗ್ನಿ ಸಂಪರ್ಕ ಪಡೆದಾಗ ಸುಟ್ಟು ನಾಶವಾದರೂ ಅದರ ಪರಿಮಳ ಸುತ್ತಲೂ ಪಸರಿಸುವಂತೆ ದೇವಿ ಮಂಥರೆಯ ಅಂತರಾತ್ಮದ ದಯಾಲಕ್ಷ್ಮಿಯು ತನ್ನ ಸತ್ಕಾರ್ಯದ ಕೀರ್ತಿಯಿಂದ ಲೋಕ ಲೋಕಗಳಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾಳೆ ಎಂದು ಗುಣಗಾನ ಮಾಡಿದ್ದಾರೆ. ಆಕೆ ಹಾಗೆ ಮಾಡಲು ವಿಧಿ ಕಾರಣವೆಂದು, ವಿಧಿ ಮಂಥರೆಯನ್ನು ಬೆರಳಾಗಿ ಮಾಡಿಕೊಂಡು ತ್ರೇತಾಯುಗ ವೀಣೆಯನ್ನು ಮಿಡಿದು ಶ್ರೀ ರಾಮಾಯಣ ಮಹಾಗಾನವನ್ನು ನುಡಿಸಿತು. ಆಕೆ ಇಲ್ಲದಿದ್ದರೆ ರಾಮ ಲೋಕವಂದ್ಯನಾಗುತ್ತಿರಲಿಲ್ಲ, ಸೀತೆ ಲೋಕ ಪೂಜ್ಯಳಾಗುತ್ತಿರಲಿಲ್ಲ ಎಂಬಂತೆ ಅತ್ಯಂತ ಅಪೂರ್ವವಾದ ರೀತಿಯಲ್ಲಿ ಮಂಥರೆಯ ಪಾತ್ರವನ್ನು ಕಡೆದು ಶ್ರೀ ರಾಮಾಯಣ ದರ್ಶನಂ ಕಾವ್ಯದ ಕೇಂದ್ರಬಿಂದುವಾಗಿ ಚಿತ್ರಿಸಿದ್ದಾರೆ.

**ಊರ್ಮಿಳೆಯ ಪಾತ್ರ**

ಕುವೆಂಪು ಅವರು ಮೂಲದಲ್ಲಿ ಕೇವಲ ನಾಮ ಮಾತ್ರವಾಗಿ ಉಲ್ಲೇಖಗೊಂಡಿದ್ದ ಊರ್ಮಿಳಾ ಪಾತ್ರವನ್ನು ತಮ್ಮ ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಕಾವ್ಯಶಕ್ತಿಯಾಗಿ, ತ್ಯಾಗಶಕ್ತಿಯಾಗಿ, ತಪಸ್‌ಶಕ್ತಿಯಾಗಿ ಚಿತ್ರಿಸಿ ಮೂಲ ಕವಿಯಿಂದ ಆದ ಅನ್ಯಾಯವನ್ನು ಸರಿಪಡಿಸಿದ್ದಾರೆ. ವಾಲ್ಮೀಕಿ ಶ್ರೀಮದ್ರಾಮಾಯಣದಲ್ಲಿ ಊರ್ಮಿಳೆಯ ಪ್ರಸ್ತಾಪ ಒಂದೆರಡು ಬಾರಿ ಮಾತ್ರ ಬರುತ್ತದೆ. ರಾಮನೊಂದಿಗೆ ಸೀತೆಯನ್ನು ವಿವಾಹ ಮಾಡುವ ಸಂದರ್ಭದಲ್ಲಿ ಊರ್ಮಿಳೆಯನ್ನು ಲಕ್ಷ್ಮಣನೊಂದಿಗೆ ವಿವಾಹ ಮಾಡುವಾಗ ಮತ್ತು ಊರ್ಮಿಳೆ ನವ ವಧುವಾಗಿ ದಶರಥನ ಅರಮನೆ ಪ್ರವೇಶ ಮಾಡಿದಾಗ ಸೊಸೆಯರನ್ನು ಸ್ವಾಗತಿಸುವ ಸಂದರ್ಭದಲ್ಲಿ ಊರ್ಮಿಳೆಯ ಹೆಸರನ್ನು ಉಲ್ಲೇಖ ಮಾಡಲಾಗಿದೆ. ಇನ್ನೆಲ್ಲೂ ಕವಿ ವಾಲ್ಮೀಕಿ ಊರ್ಮಿಳೆಯ ಹೆಸರನ್ನೂ ಹೇಳುವುದಿಲ್ಲ. ರಾಮ ಸೀತೆಯರೊಂದಿಗೆ ಲಕ್ಷ್ಮಣನೂ ಕಾಡಿಗೆ ಹೋಗುತ್ತಾನೆ. ಆಗ ಆತನ ಪತ್ನಿ ಊರ್ಮಿಳೆ ಎಲ್ಲಿದ್ದಳು? ಏನು ಮಾಡುತ್ತಿದ್ದಳು? ಅವಳ ಪ್ರತಿಕ್ರಿಯೆ ಏನು ಎಂಬುದರ ಬಗ್ಗೆ ವಾಲ್ಮೀಕಿ ಏನನ್ನೂ ಹೇಳುವುದಿಲ್ಲ. ಊರ್ಮಿಳೆಯ ಬಗ್ಗೆ ಒಂದು ರೀತಿಯ ಅನಾದರವನ್ನು ಇಲ್ಲಿ ಕಾಣುತ್ತೇವೆ. ಆದರೆ ಕುವೆಂಪು ಶ್ರೀ ರಾಮಾಯಣ ದರ್ಶನಂನಲ್ಲಿ ಊರ್ಮಿಳಾ ದೇವಿಯನ್ನು ಅತ್ಯಂತ ಪ್ರೀತಿ ಗೌರವದಿಂದ ನೆನೆಯುತ್ತಾರೆ. ರಾಮಾದಿಯರು ಕಾಡಿಗೆ ಹೋಗುವಾಗ ಊರ್ಮಿಳೆ ಸರಯೂ ನದಿಯ ತೀರದಲ್ಲಿ ಪರ್ಣಕುಟಿಯನ್ನು ರಚಿಸಿ ಚಿರತಪಸ್ವಿಯಾಗಿ, ರಾಮನಿಗೂ, ಸೀತೆಗೂ, ಪತಿಗೂ ಒಳಿತಾಗಲೆಂದು ತಪಸ್ಸು ಮಾಡುತ್ತಿರುತ್ತಾಳೆ. ಇದನ್ನು "ಪೆಣ್ಣೆಂಬ ತಪಕೆ ನೀಂ ನಿರುಪಮ ಪ್ರತಿಮೆಯೌ" ಎಂದು ಉದ್ಘಾರ ತೆಗೆಯುತ್ತಾರೆ. ಅಹಲ್ಯೆಯ ತಪಕ್ಕಿಂತಲೂ ಭಿನ್ನವಾದ, ಮಿಗಿಲಾದ ತಪಸ್ಸು ಊರ್ಮಿಳೆಯದು, ಅವಳನ್ನು ನೆನೆಯುವುದೇ ಇತರರಿಗೆ

ಒಂದು ಮಹಾವ್ರತವೆಂದು ಕವಿ ಹೇಳಿದ್ದಾರೆ. ಇದು ಊರ್ಮಿಳೆಯ ತಪಸ್ಸಿನ ಬಗ್ಗೆ ಕವಿಗಿರುವ ಗೌರವವನ್ನು ಸೂಚಿಸುತ್ತದೆ.
ಕುವೆಂಪು ರಾಮಸೀತೆ ಲಕ್ಷ್ಮಣರು ಅರಣ್ಯದಲ್ಲಿದ್ದ ಸಂದರ್ಭದಲ್ಲಿ ಊರ್ಮಿಳೆಯನ್ನು ನೆನಪಿಸಿಕೊಳ್ಳುತ್ತಾರೆ.

ನೀರವ ಧ್ಯಾನವಧೂ ಹೇ ಊರ್ಮಿಳಾದೇವಿ,
ಸೌಮಿತ್ರಿಯರ್ದಾಂಗಿ, ಹೇಳು ನೀನೆಲ್ಲಿದ್ದೆ
ಕಡೆದ ಕಡಲೋಲಯೋಧ್ಯಾನಗರಿ ಮಸಗಿದಾ
ಕ್ರಾಂತಿದಿನದಿಂದು? ನಿನ್ನೆರ್ದೆ ಪೂವಿನಾ ವೇಧೆ
ಜಗಳ್ದುದಿಲ್ಲವೆ ತುಳ್ಕಿ ನೇತ್ರ ಶತಪತ್ರದಿಂ?
ಪೆಣ್ತನಂ ತಾನೆ ನೀನಲ್ಲದೂರ್ಮಿಳೆಯಲ್ತು:
ಪೆಣ್ಣೆಂಬ ತಪಕೆ ನೀಂ ನಿರುಪಮ ಪ್ರತಿಮೆಯೌ

ಎಂದು ಮನತುಂಬಿ ಹಾಡಿದ್ದಾರೆ. ಅಷ್ಟೇ ಅಲ್ಲ ಕೃತಿಯ ಉದ್ದಕ್ಕೂ ಆಕೆಯನ್ನು ವಿವಿಧ ಕಾರಣಕ್ಕಾಗಿ ಸ್ಮರಿಸುತ್ತಾರೆ. ಊರ್ಮಿಳೆಯ ಪ್ರಸ್ತಾಪ ಮಾಡುತ್ತಾರೆ. ವನವಾಸದಲ್ಲಿ ಚಿತ್ರಕೂಟದಲ್ಲಿದ್ದ ಸಂದರ್ಭದಲ್ಲಿ ರಾಮನಿಗೆ ಊರ್ಮಿಳೆಯ ಕನಸು ಬೀಳುವಂತೆ ಕವಿ ಚಿತ್ರಿಸಿ, ರಾಮನು ನಡುರಾತ್ರಿಯಲ್ಲಿ ಲಕ್ಷ್ಮಣನನ್ನು ಎಬ್ಬಿಸಿ,

ತಮ್ಮ ಪಿಂತಿರುಗಯೋಧ್ಯೆಗೀ
ರಾತ್ರಿಯಂ ಕಳೆದು ಊರ್ಮಿಳೆ ನಿನ್ನೆನಯೆ ಕರೆದು
ಗೋಳಾಡುತಿರ್ಪಂತೆ ಕಂಡೆ ಕನಸಂ

ಎಂದಾಗ ಲಕ್ಷ್ಮಣನು ನೀಡುವ ಉತ್ತರ ಊರ್ಮಿಳೆಯ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತದೆ.

___________________.ಅಣ್ಣ
ಕಾಂತೆ ಊರ್ಮಿಳೆ ತಪಸ್ವಿನಿ ನಿನ್ನೊಡನೆ ಬರುವ
ಮುನ್ನಮಾಕೆಯ ಕೃಪೆಯನಾಂತೆ ಬಂದೆನ್ ನಿನಗೆ
ಚಿಂತೆಯೆನಿತಾದೆಸೆಗಂ ಬೇಡಮ್

ಎನ್ನುತ್ತಾನೆ. ವನವಾಸದ ಮಧ್ಯೆಮಧ್ಯೆ ಸೀತೆಯೂ ಕೂಡ ತನ್ನ ತಂಗಿ ಊರ್ಮಿಳೆಯನ್ನು ನೆನೆಯುತ್ತಾಳೆ. ಚಿತ್ರಕೂಟದಲ್ಲಿ ಯುಗ ಯುಗದಿಂದ ಇರುವ ಒಂದು ಕಲ್ಲು ಸೀತೆಗೆ ಊರ್ಮಿಳೆಯ ಪ್ರತಿರೂಪದಂತೆ ಕಾಣುತ್ತಿರುತ್ತದೆ. ಲಕ್ಷ್ಮಣನು ಕಾಡಿನಿಂದ ಸೌದೆಯನ್ನು ಹೊತ್ತು ತರುವಾಗ ಆ ಕಲ್ಲಿನ ಬಳಿ ಕುಳಿತು ಆಯಾಸ ಪರಿಹರಿಸಿಕೊಳ್ಳುತ್ತಿದ್ದ ವಿವರವನ್ನು ನೀಡುವಾಗಲೂ ಅದನ್ನು ಸೀತೆ ಕಂಡ ಊರ್ಮಿಳೆ ರೂಪವೆಂದು ಹೇಳಿದ್ದಾರೆ. ಒಮ್ಮೆ ಹಸಿ ಸೌದೆಯ ಕಾರಣದಿಂದಾಗಿ ಒಲೆ ಉರಿಯದೆ, ಹೊಗೆಯಿಂದಾಗಿ ಅಡುಗೆ ಮಾಡಲಾಗದೆ ಸೀತೆ ಸಂಕಟ ಪಡುವುದನ್ನು ಕಂಡು ಲಕ್ಷ್ಮಣ ಒಲೆಯ ಬಳಿಗೆ ಹೋಗಿ ತನ್ನ ತಪಸ್ವಿನಿ ಸತಿ ಊರ್ಮಿಳೆಯನ್ನು ನೆನೆದು ಆ ಒಲೆಯನ್ನು ಊದುತ್ತಾನೆ. ಆಗ ಒಲೆ ಧಗ್ಗನೆ ಹೊತ್ತಿಕೊಳ್ಳುತ್ತದೆ. ಹಾಗೂ ಉರ್ಮಿಳೆಯ ತಪಶಕ್ತಿಯ ಪ್ರಭಾವವು ಕಾವ್ಯದ ಉದ್ದಕ್ಕೂ ಲಕ್ಷ್ಮಣನನ್ನೂ, ಸೀತೆರಾಮರನ್ನೂ ಕಷ್ಟದಿಂದ ಪಾರು ಮಾಡುವಲ್ಲಿ ಸಕ್ರಿಯವಗಿತ್ತೆಂದು ಕುವೆಂಪು ಸೂಚ್ಯವಾಗಿ ಹೇಳಿದದ್ದಾರೆ. ಕುವೆಂಪು ಅವರು ಕಾವ್ಯದಲ್ಲಿ ಲಕ್ಷ್ಮಣನ ಹೆಸರನ್ನು ಹೇಳುವಾಗಲೆಲ್ಲ ಊರ್ಮಿಳಾವಲ್ಲಭ, ಊರ್ಮಿಳೇಶ, ಊರ್ಮಿಳಪ್ರಿಯ, ಊರ್ಮಿಳಾಕಾಂತ, ಊರ್ಮಿಳಾ ಪ್ರಾಣಪ್ರಿಯ ಎಂದೆಲ್ಲಾ ಹೇಳುತ್ತಾರೆ. ಹೀಗೆ ಊರ್ಮಿಳೆಯ ಅಪೂರ್ವ ವ್ಯಕ್ತಿತ್ವವನ್ನು ಓದುಗರಿಗೆ ಮುಟ್ಟಿಸಿದ್ದಾರೆ.

## ಉಪಸಂಹಾರ

ವಾಲ್ಮೀಕಿ ರಾಮಾಯಣದಲ್ಲಿ ಬರುವ ಪ್ರಮುಖ ಪಾತ್ರಗಳನ್ನೆಲ್ಲ ಕುವೆಂಪು ಶ್ರೀ ರಾಮಾಯಣ ದರ್ಶನಂ ಕಾವ್ಯದಲ್ಲಿ ಆದುನಿಕ ಸಂದರ್ಭಕ್ಕೆ ಸೂಕ್ತವಾಗುವಂತೆ ಬದಲಾಯಿಸಿಕೊಂಡು ಚಿತ್ರಿಸಿದ್ದಾರೆ. ಮೂಲದಲ್ಲಿ ಕೆಲವೆಡೆ ಮಾತ್ರ ಚಿತ್ರಣಗೊಂಡಿದ್ದ ಕೈಕೆ, ಊರ್ಮಿಳ, ಮಂಥರೆ ಮೊದಲಾದ ಪಾತ್ರಗಳನ್ನು ಹೊಸ ಕಲ್ಪನೆಗಳೊಂದಿಗೆ ಅವುಗಳ ಪೂರ್ವಾಪರಗಳನ್ನೊಳಗೊಂಡಂತೆ ಚಿತ್ರಿಸಿ ಆ ಪಾತ್ರಗಳೆಲ್ಲ ಜೀವ ತುಂಬಿಕೊಂಡು ಹೊಸ ಶೋಭೆಯಿಂದ ಕಂಗೊಳಿಸುವಂತೆ ಮಾಡಿದ್ದಾರೆ. ಜೊತೆಗೆ ಇಡೀ ಕೃತಿಯ ತುಂಬೆಲ್ಲ ಊರ್ಮಿಳೆ ಮತ್ತು ಮಂಥರೆಯ ಪ್ರಭಾವ ವ್ಯಾಪಿಸಿಕೊಂಡಿರುವಂತೆ ಚಿತ್ರಿಸಿದ್ದಾರೆ. ಕೈಕೆ ಮತ್ತು ಮಂಥರೆಯಂಥ ಪಾತ್ರಗಳಿಗೆ ಮೂಲದಲ್ಲಿ ಅಂಟಿದ್ದ ಕಳಂಕವನ್ನು ನಿವಾರಿಸಿ, ಅವು ಪಶ್ಚಾತ್ತಾಪದಿಂದ ನೊಂದು ಬೆಂದು ಬೆಳವಣಿಗೆ ಹೊಂದಿದ ಪಾತ್ರಗಳಾಗಿ ರೂಪು ಪಡೆದಿರುವುದನ್ನು ಕಾಣಬಹುದು.

## ಪರಾಮರ್ಶನ ಗ್ರಂಥ:


೧. ದೇಜಗೌ: ಶ್ರೀ ರಾಮಾಯಣ ದರ್ಶನಂ ವಚನಚಂದ್ರಿಕೆ,೨೦೧೪, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
೨. ಲಕ್ಕಪ್ಪಗೌಡ ಎಚ್.ಜೆ.: ಶ್ರೀ ರಾಮಾಯಣ ದರ್ಶನಂ ಪಾತ್ರಲೋಕ, ೨೦೦೬, ಪವನಜ ಪ್ರಕಾಶನ, ಬೆಂಗಳೂರು.
೩. ಶಿವಾರೆಡ್ಡಿ ಕೆ.ಸಿ. (ಸಂ): ಕುವೆಂಪು ಸಮಗ್ರ ಕಾವ್ಯ, ಸಂಪುಟ–೩, ೨೦೧೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೪. ಶಿವಾರೆಡ್ಡಿ ಕೆ.ಸಿ. (ಸಂ): ಕುವೆಂಪು ಸಮಗ್ರ ಕಾವ್ಯ, ಸಂಪುಟ–೧೦ ೨೦೧೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಸಿ.ಪಿ.ಕೆ.: ಶ್ರೀ ರಾಮಾಯಣ ದರ್ಶನಂ ವಿವೇಚನೆ, ೨೦೧೨, ಪೊಡವಿ ಪ್ರಕಾಶನ, ಮೈಸೂರು.